

بِسۡمِ اللّٰہِ الرَّحۡمٰنِ الرَّحِیۡمِ

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **11–05–2018** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಈ ದಿನ ನಾನು ಕೆಲವು ಸಹಾಬರ ಬಗ್ಗೆ ಪ್ರಸ್ತಾಪಿಸುವೆನು. ಮೊದಲು ನಾನು ಅಬ್ದುಲ್ಲಾ ಬಿನ್ ಜಹ್‌ಶ್ ಬಗ್ಗೆ ಹೇಳುವೆನು. ಅವರ ಮಾತೆ ಅಬ್ದುಲ್ ಮುತ್ತಲಿಬರ ಪುತ್ರಿಯಾಗಿದ್ದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪಿತೃ ಸಹೋದರಿಯಾಗಿದ್ದರು. ಆದುದರಿಂದ ಅಬ್ದುಲ್ಲಾರವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪಿತೃ ಸಹೋದರಿಯ ಮಗನಾದ ಸಹೋದರನಾಗಿದ್ದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ದಾರ್‌ಅರ್‌ಖಮ್‌ಗೆ ಹೋಗುವ ಮೊದಲೇ ಅವರು ಇಸ್ಲಾಮ್ ಸ್ವೀಕರಿಸಿದ್ದರು. ಮಕ್ಕದ ಬಹುದೇವಾರಾಧಕರಾದ ಖುರೈಶಿಗಳ ದೌರ್ಜನ್ಯಗಳಿಂದ ಅವರ ಕುಟುಂಬ ಸಹ ಸುರಕ್ಷಿತವಾಗಿರಲಿಲ್ಲ. ಅವರು ತಮ್ಮ ಇಬ್ಬರು ಸಹೋದರರಾದ ಹಝ್ರತ್ ಅಬೂ ಅಹ್ಮದ್ ಮತ್ತು ಹಝ್ರತ್ ಉಬೈದುಲ್ಲಾ ಮತ್ತು ಸಹೋದರಿಯರಾದ ಹಝ್ರತ್ ಝೈನಬ್ ಬಿನ್ತ್ ಜಹ್‌ಶ್, ಹಝ್ರತ್ ಉಮ್ಮು ಹಬೀಬ ಬಿನ್ತ್ ಜಹ್‌ಶ್, ಮತ್ತು ಹಮ್ನ ಬಿನ್ತ್ ಜಹ್‌ಶ್ ಜೊತೆಗೆ ಎರಡು ಸಾರಿ ಅಬಿಸೀನಿಯಾ ದೇಶಕ್ಕೆ ವಲಸೆ ಹೋಗಿದ್ದರು. ಹಝ್ರತ್ ಅಬ್ದುಲ್ಲಾ ಬಿನ್ ಜಹ್‌ಶ್ ಮದೀನಕ್ಕೆ ಹಿಜರತ್ ಮಾಡುವ ಮೊದಲು ಮಕ್ಕಕ್ಕೆ ಆಗಮಿಸಿ ತಮ್ಮ ಗೋತ್ರವಾದ ಬನೂ ಗನಮ್‌ಗೆ ಸೇರಿದ ದೋದಾನಿನಲ್ಲಿ ಇಸ್ಲಾಮ್ ಧರ್ಮ ಸ್ವೀಕರಿಸಿದ ಎಲ್ಲರನ್ನೂ ತಮ್ಮ ಜೊತೆಗೆ ಕರೆದುಕೊಂಡು ಮದೀನಕ್ಕೆ ತಲಪಿದರು. ಅವರು ಈ ರೀತಿ ತಮ್ಮ ಸಂಬಂಧಿಕರ ಸಮೇತ ಮಕ್ಕವನ್ನು ಬಿಟ್ಟುಹೋದ ಕಾರಣ ಬಡಾವಣೆಗಳು ಜನರಹಿತವಾದುವು ಮತ್ತು ಬಹುತೇಕ ಮನೆಗಳಿಗೆ ಬೀಗ ಜಡಿಯಲಾಗಿತ್ತು. ಇದೇ ಸ್ಥಿತಿ ಈಗ ಪಾಕಿಸ್ಥಾನದಲ್ಲಿ ಅಹ್ಮದಿಯರಿಗೆ ಸಂಬಂಧಿಸಿ ಸಂಭವಿಸುತ್ತದೆ. ಕೆಲವು ಗ್ರಾಮಗಳು ಬರಿದಾಗಿವೆ.

ಇಬ್ನು ಇಸ್‌ಹಾಖ್ ವರದಿ ಮಾಡುತ್ತಾರೆ: ಬನೂ ಜಹ್‌ಶ್ ಬಿನ್ ರಿಯಾಬ್ ಮಕ್ಕದಿಂದ ಮದೀನಕ್ಕೆ ಹಿಜರತ್ ಮಾಡಿದಾಗ ಅಬೂ ಸುಫ್‌ಯಾನ್ ಬಿನ್ ಹರಬ್ ಅವರ ಮನೆಯನ್ನು ಅಮರ್ ಬಿನ್ ಅಲ್‌ಖಮನಿಗೆ ಮಾರಾಟ ಮಾಡಿದನು. ಇದರ ಸಮಾಚಾರ ಮದೀನದಲ್ಲಿದ್ದ ಅಬ್ದುಲ್ಲಾ ಬಿನ್ ಜಹ್‌ಶ್‌ರಿಗೆ ತಲಪಿದಾಗ ಅವರು ಈ ವಿಷಯವನ್ನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ತಿಳಿಸಿದರು. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಓ ಅಬುಲ್ಲಾ ಅಲ್ಲಾಹನು ಅದಕ್ಕೆ ಬದಲಾಗಿ ಸ್ವರ್ಗದಲ್ಲಿ ನಿನಗೆ ಮಹಲನ್ನು ದಯಪಾಲಿಸುವುದಾದರೆ ನಿನಗೆ ಇಷ್ಟವಾಗದೆ. ಹಝ್ರತ್ ಅಬ್ದುಲ್ಲಾ ಬಿನ್ ಜಹ್‌ಶ್ ಹೇಳಿದರು: ಓ ಅಲ್ಲಾಹನ ಸಂದೇಶವಾಹಕರೇ ನಾನು ತೃಪ್ತನಾಗುವೆನು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಆ ಮಹಲು ನಿನಗೆ ದೊರಕುವುದು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಅಬ್ದುಲ್ಲಾ ಬಿನ್ ಜಹ್‌ಶ್‌ರನ್ನು ಒಂದು ಸೇನಾ ದಳದ ನಾಯಕನಾಗಿ ವಾದಿನಖ್‌ಲ ಪ್ರದೇಶಕ್ಕೆ ಕಳುಹಿಸಿದ್ದರು. ಅದರ ಬಗ್ಗೆ ಗ್ರಂಥಗಳಲ್ಲಿ ಹೀಗೆ ಬರೆದಿದೆ: ಒಂದು ದಿನ ಇಶಾ ನಮಾಝ್ ನಿರ್ವಹಿಸಿದ ನಂತರ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು, ಬೆಳಿಗ್ಗೆ ನೀವು ನಿಮ್ಮ ಆಯುಧ ಸಮೇತರಾಗಿ ಬನ್ನಿರಿ. ನಿಮ್ಮನ್ನು ಒಂದು ಸ್ಥಳಕ್ಕೆ ಕಳುಹಿಸಲಿಕ್ಕಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಫಜರ್ ನಮಾಝ್ ನಿರ್ವಹಿಸಿದ ನಂತರ ಹಝ್ರತ್ ಅಬ್ದುಲ್ಲಾ ಬಿನ್ ಜಹ್‌ಶ್ ಬಿಲ್ಲುಬಾಣ, ಈಟಿ ಮತ್ತು ಗುರಾಣಿ ಸಹಿತ ತನ್ನ ಮನೆ ಬಾಗಿಲಲ್ಲಿ ಕಾಯುತ್ತಿರುವುದಾಗಿ ಕಂಡರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಅಬೀ ಬಿನ್ ಕಅಬರನ್ನು ಕರೆದು ಒಂದು ಪತ್ರ ಬರೆಯಲು ಹೇಳಿದರು. ಆ ಪತ್ರ ಬರೆಸಿದ ನಂತರ ಹಝ್ರತ್ ಅಬ್ದುಲ್ಲಾ ಬಿನ್ ಜಹ್‌ಶ್‌ರನ್ನು ಕರೆದು ಅವರಿಗೆ ಕೊಟ್ಟು ಹೇಳಿದರು: ನಾನು ನಿಮ್ಮನ್ನು ಒಂದು ದಳದ ಮೇಲ್ವಿಚಾರಕನನ್ನಾಗಿ ನೇಮಿಸುತ್ತೇನೆ. ಅವರನ್ನು ಕಳುಹಿಸುವಾಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರಿಗೆ ಅಮೀರುಲ್ ಮೂಮಿನೀನ್ ಎಂಬ ಬಿರುದು ನೀಡಿದರು. ಹಾಗೆ ಅಬ್ದುಲ್ಲಾ ಬಿನ್ ಜಹ್‌ಶ್ ಅಮೀರುಲ್ ಮೂಮಿನೀನ್ ಎಂಬ ಬಿರುದು ಲಭಿಸಿದ ಪ್ರಥಮ ಸಹಾಬಿಯಾದರು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅಬ್ದುಲ್ಲಾ ಬಿನ್ ಜಹ್‌ಶ್‌ರ ನೇತೃತ್ವದಲ್ಲಿ ಹಿಜರಿ 2ರಲ್ಲಿ ಹನ್ನೆರಡು ಜನರನ್ನು ನಖ್‌ಲಕ್ಕೆ ಕಳುಹಿಸಿದ್ದರು. ಅವರಿಗೆ ಒಂದು ಪತ್ರಕೊಟ್ಟು ಎರಡು ದಿನದ ನಂತರ ಅದನ್ನು ತೆರೆದು ಓದಬೇಕೆಂದು ಹೇಳಿದ್ದರು. ಹಝ್ರತ್ ಅಬ್ದುಲ್ಲಾ ಬಿನ್ ಜಹ್‌ಶ್ ಎರಡು ದಿನದ ನಂತರ ಆ ಪತ್ರ ತೆರೆದು ಓದಿದಾಗ ಅದರಲ್ಲಿ ಬರೆದಿತ್ತು– ನೀವು ನಖ್‌ಲದಲ್ಲಿಯೇ ತಂಗಿರಿ. ಖುರೈಶರ ಚಲನವಲನಗಳನ್ನು ನಿರೀಕ್ಷಿಸಿ ನಮಗೆ ತಿಳಿಸಿರಿ. ಆ ಸಂದರ್ಭದಲ್ಲಿ ಆಕಸ್ಮಿಕವಾಗಿ ಖುರೈಶಿಗಳ ಒಂದು ಚಿಕ್ಕ ಗುಂಪು ವ್ಯಾಪಾರದ ಸರಕುಗಳೊಂದಿಗೆ ಸಿರಿಯಾದಿಂದ ಮರಳಿ ಬರುತ್ತಿತ್ತು. ಹಝ್ರತ್ ಅಬ್ದುಲ್ಲಾ ಬಿನ್ ಜಹ್‌ಶ್ ತನ್ನ ಸ್ವಂತ ಯೋಚನೆ ಪ್ರಕಾರ ಆ ವ್ಯಾಪಾರಿ ಸಂಘವನ್ನು ಆಕ್ರಮಿಸಿದರು. ಅವಿಶ್ವಾಸಿಗಳಲ್ಲಿ ಒಬ್ಬನಾದ ಅಮರ್ ಬಿನ್ ಅಲ್ ಹಝ್ರಮಿ ಕೊಲ್ಲಲ್ಪಟ್ಟನು. ಇಬ್ಬರು ಬಂಧಿತರಾದರು.

ಮುಸ್ಲಿಮರು ಹೋರಾಟದಲ್ಲಿ ದೊರೆತ ಸಾಮಗ್ರಿಗಳನ್ನು ವಶಪಡಿಸಿಕೊಂಡರು. ಅವರು ಮದೀನಕ್ಕೆ ಮರಳಿ ಬಂದು ಈ ಘಟನೆ ಬಗ್ಗೆ ತಿಳಿಸಿದಾಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕೋಪದಿಂದ ಹೇಳಿದರು: ನಾನು ನಿಮಗೆ ಹೋರಾಡಲು ಅನುಮತಿ ನೀಡಿರಲಿಲ್ಲ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೋರಾಟದಲ್ಲಿ ಸ್ವಾಧೀನ ಪಡಿಸಿದ ಸಾಮಗ್ರಿಗಳನ್ನು ಸ್ವೀಕರಿಸಲು ಸಹ ಒಪ್ಪಲಿಲ್ಲ.

ಬುಖಾರಿಯ ಒಂದು ಹದೀಸನ್ನು ವ್ಯಾಖ್ಯಾನಿಸುತ್ತಾ ಹಝ್ರತ್ ಸಯ್ಯಿದ್ ಝೈನುಲ್ ಆಬಿದೀನ್ ವಲಿಯುಲ್ಲಾ ಶಾ ಸಾಹಿಬ್ ಬರೆಯುತ್ತಾರೆ: ಈ ಪ್ರತಿನಿಧಿ ಸಂಘವನ್ನು ಯಾವ ಉದ್ದೇಶಕ್ಕಾಗಿ ಕಳುಹಿಸಲಾಗಿತ್ತೋ ಅದರಲ್ಲಿ ಅವರು ಪೂರ್ಣವಾಗಿ ಜಯಶಾಲಿಗಳಾದರು. ಬಂಧಿತರಾದವರ ಮೂಲಕ ಅವರು ಖುರೈಶಿಗಳ ಚಲನವಲನಗಳ ಕುರಿತು ನಿಖರವಾದ ಮಾಹಿತಿ ಗಳಿಸಿದರು. ಅವರನ್ನು ಮಕ್ಕದ ಜನರ ಯುದ್ಧ ಸಿದ್ಧತೆ ತಿಳಿಯಲು ಕಳುಹಿಸಲಾಗಿತ್ತು. ಆದರೆ ಅವರು ವ್ಯಾಪಾರ ಸಂಘವನ್ನು ಲೂಟಿ ಮಾಡಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಮರಳಿದರೆ ಸಾಕು ಎಂದು ಭಾವಿಸಿದರು ಎಂದು ಹೇಳುವುದು ಬಹಳ ದೂರದ ಯೋಚನೆಯಾಗಿದೆ.

ಹಝ್ರತ್ ಅಬ್ದುಲ್ಲಾ ಬಿನ್ ಜಹ್‌ಶ್ ಬಹಳ ಉನ್ನತ ಮಟ್ಟದ ಸಹಾಬಿಯಾಗಿದ್ದರು. ಅವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪಿತೃ ಸಹೋದರ ಪುತ್ರನಾಗಿದ್ದರು. ಚರಿತ್ರೆಯಲ್ಲಿ ಬರೆದಿದೆ, ಅಲ್ಲಾಹನ ಬಗ್ಗೆ ಪ್ರೀತಿ ಮತ್ತು ಅವನ ಸಂದೇಶವಾಹಕರ ಬಗ್ಗೆ ಪ್ರೀತಿ, ಅವರನ್ನು ಲೋಕದ ಇತರ ವಿಷಯಗಳ ಬಗ್ಗೆ ನಿರ್ಲಕ್ಷ್ಯರನ್ನಾಗಿ ಮಾಡಿತ್ತು. ಅವರಿಗಿದ್ದ ಅಭಿಲಾಷೆ ತನ್ನ ಜೀವ ಅಲ್ಲಾಹನ ಮಾರ್ಗದಲ್ಲಿ ಬಲಿಯರ್ಪಿಸಲ್ಪಡಬೇಕೆಂದಾಗಿತ್ತು. ಅವರ ಈ ಆಶೆ ಈಡೇರಿತು. ಅವರು ಶಹೀದರಾಗುವ ಮೊದಲು ಸಂಭವಿಸಿದ ಪ್ರಾರ್ಥನೆಯ ಅಂಗೀಕಾರದ ಒಂದು ಘಟನೆ ಇದೆ. ಇಸ್‌ಹಾಖ್ ಬಿನ್ ಸಅದ್ ಬಿನ್ ಅಬೀ ವಖಾಸ್ ತನ್ನ ತಂದೆಯಿಂದ ವರದಿ ಮಾಡುತ್ತಾರೆ: ಹಝ್ರತ್ ಅಬ್ದುಲ್ಲಾ ಬಿನ್ ಜಹ್‌ಶ್ ನನ್ನ ತಂದೆ ಸಅದ್‌ರೊಂದಿಗೆ ಉಹುದ್ ಯುದ್ಧದ ಸಂದರ್ಭದಲ್ಲಿ ಹೇಳಿದರು: 'ಬಾ ನಾವು ದುಆ ಮಾಡೋಣ.' ಅವರಿಬ್ಬರೂ ಒಂದು ಬದಿಗೆ ಸರಿದರು. ಮೊದಲು ಹಝ್ರತ್ ಸಅದ್ ಪ್ರಾರ್ಥಿಸಿದರು: ಓ ಅಲ್ಲಾಹ್, ನಾನು ನಾಳೆ ಶತ್ರುಗಳ ವಿರುದ್ಧ ಹೋರಾಡುವಾಗ ನನ್ನನ್ನು ಬಲಿಷ್ಠನಾದ ಒಬ್ಬನು ಎದುರಿಸುವಂತೆ ಮಾಡು. ನಾನು ನಿನ್ನ ಮಾರ್ಗದಲ್ಲಿ ಅವನ ವಿರುದ್ಧ ಹೋರಾಡಿ ಅವನನ್ನು ಹತ್ಯೆ ಮಾಡುವಂತೆ ಮತ್ತು ಅವನ ಆಯುಧಗಳನ್ನು ವಶಪಡಿಸುವಂತೆ ಮಾಡು. ಆಗ ಅಬ್ದುಲ್ಲಾ ಬಿನ್ ಜಹ್‌ಶ್ ಆಮೀನ್ ಎಂದು ಹೇಳಿದರು. ಅನಂತರ ಅಬ್ದುಲ್ಲಾ ಬಿನ್ ಜಹ್‌ಶ್ ಹೀಗೆ ಪ್ರಾರ್ಥಿಸಿದರು: ಓ ಅಲ್ಲಾಹ್, ನಾಳೆ ನಾನು ಎದುರಿಸುವವನು ಬಲಿಷ್ಠನೂ ಶಕ್ತಿಸಾಮರ್ಥ್ಯವುಳ್ಳವನೂ ಆಗಲಿ. ಅವನು ನನ್ನೊಂದಿಗೆ ಹೋರಾಡಿ ನನ್ನನ್ನು ಜಯಿಸಿ ನನ್ನನ್ನು ಹತ್ಯೆ ಮಾಡಲಿ. ನನ್ನನ್ನು ಹಿಡಿಗೂಡಿ ನನ್ನ ಮೂಗು, ಕಿವಿ ಕತ್ತರಿಸಲಿ. ಓ ಅಲ್ಲಾಹ್, ನಾನು ನಿನ್ನ ಮುಂದೆ ಹಾಜರಾಗುವಾಗ ನೀನು ನನ್ನೊಂದಿಗೆ ಕೇಳು. ಓ ಅಬ್ದುಲ್ಲಾ ಯಾರ ಮಾರ್ಗದಲ್ಲಿ ನಿನ್ನ ಮೂಗು ಮತ್ತು ಎರಡು ಕಿವಿಗಳು ಕತ್ತರಿಸಲ್ಪಟ್ಟವು. ನಾನು ಹೇಳುವೆನು: ನಿನ್ನ ಮತ್ತು ನಿನ್ನ ಸಂದೇಶವಾಹಕರ ಮಾರ್ಗದಲ್ಲಿ ಅವು ಕತ್ತರಿಸಲ್ಪಟ್ಟವು. ನೀನು ಉತ್ತರವಾಗಿ ಹೇಳು: ನೀನು ಹೇಳಿದುದು ಸತ್ಯ ಎಂದು. ಹಝ್ರತ್ ಸಅದ್ ಹೇಳುತ್ತಾರೆ: ಹಝ್ರತ್ ಅಬ್ದುಲ್ಲಾರ ದುಆ ನನ್ನ ದುಆಕ್ಕಿಂತ ಉತ್ತಮವಾಗಿತ್ತು. ನಾನು ಯುದ್ಧದ ಕೊನೆಯ ದಿನ ನೋಡಿದೆ. ಅವರ ಮೂಗು ಮತ್ತು ಎರಡು ಕಿವಿಗಳು ಒಂದು ನೂಲಿನಲ್ಲಿ ಕಟ್ಟಿಡಲಾಗಿತ್ತು. ಅವುಗಳು ಕತ್ತರಿಸಲ್ಪಟ್ಟು ನೂಲಿನಲ್ಲಿ ಪೋಣಿಸಲಾಗಿತ್ತು.

ಹಝ್ರತ್ ಮುತ್ತಲಿಬ್ ಬಿನ್ ಅಬ್ದುಲ್ಲಾ ಬಿನ್ ಹನ್‌ತಬ್ ವರದಿ ಮಾಡುತ್ತಾರೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಉಹುದ್ ಯುದ್ಧಕ್ಕೆ ಹೋಗುತ್ತಿದ್ದಾಗ ಒಂದು ಸ್ಥಳದಲ್ಲಿ ತಂಗಿದರು. ಹಝ್ರತ್ ಉಮ್ಮು ಸಲ್ಮ ಬೇಯಿಸಿದ ಮಾಂಸ ತಂದರು. ಅದರಿಂದ ಸ್ವಲ್ಪ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತಿಂದರು. ಅವರು ಒಂದು ಪಾನೀಯ ತಂದಾಗ ಅದನ್ನೂ ಕುಡಿದರು. ಒಬ್ಬ ವ್ಯಕ್ತಿ ಆ ಪಾನೀಯದ ಪಾತ್ರೆ ತೆಗೆದುಕೊಂಡು ಅದರಿಂದ ಸ್ವಲ್ಪ ಕುಡಿದರು. ಅನಂತರ ಅಬ್ದುಲ್ಲಾ ಬಿನ್ ಜಹ್‌ಶ್ ಆ ಪಾತ್ರೆ ತೆಗೆದುಕೊಂಡು ಅದರಿಂದ ಕುಡಿದು ಮುಗಿಸಿದರು. ಒಬ್ಬ ಹೇಳಿದ ನನಗೂ ಸ್ವಲ್ಪ ಕೊಡಿರಿ. ನೀವು ನಾಳೆ ಬೆಳಿಗ್ಗೆ ಎಲ್ಲಿಗೆ ಹೋಗುವಿರೆಂದು ನಿಮಗೆ ತಿಳಿದಿದೆ. ಹಝ್ರತ್ ಅಬ್ದುಲ್ಲಾ ಬಿನ್ ಜಹ್‌ಶ್ ಹೇಳಿದರು: ನನಗೆ ಅದು ತಿಳಿದಿದೆ. ನಾನು ದಾಹಶಮನ ಹೊಂದಿ ಅಲ್ಲಾಹನನ್ನು ಭೇಟಿಯಾಗುವುದನ್ನು ಇಷ್ಟಪಡುತ್ತೇನೆ– ಅವನನ್ನು ದಾಹ ಭರಿತನಾಗಿ ಕಾಣುವುದಕ್ಕಿಂತ ಎಂದು ಹೇಳಿದರು. ಈ ಸಹಾಬರ ಮನೋಭಾವ ವಿಸ್ಮಯಕರವಾಗಿದೆ. ಅಲ್ಲಾಹನೊಂದಿಗೆ ಪ್ರೀತಿ ಮತ್ತು ಅವನ ಬೇಟಿಗೆ ಸಿದ್ಧತೆಗಳು ಸಹ ಆಶ್ಚರ್ಯಕರವಾಗಿದೆ.

ಹಝ್ರತ್ ಅಬ್ದುಲ್ಲಾ ಬಿನ್ ಜಹ್‌ಶ್ ಮತ್ತು ಹಝ್ರತ್ ಹಮ್‌ಝ ಬಿನ್ ಮುತ್ತಲಿಬ್‌ರನ್ನು ಒಂದೇ ಗೋರಿಯಲ್ಲಿ ದಫನ್ ಮಾಡಲಾಗಿತ್ತು. ಹಝ್ರತ್ ಹಮ್‌ಝರವರು ಹಝ್ರತ್ ಅಬ್ದುಲ್ಲಾ ಬಿನ್ ಜಹ್‌ಶ್‌ರವರ ಮಾತೃ ಸಹೋದರನ ಪುತ್ರರಾಗಿದ್ದರು. ಶಹಾದತ್ ಸಮಯದಲ್ಲಿ ಅವರ ಪ್ರಾಯ ನಲ್ವತ್ತಕ್ಕಿಂತ ಸ್ವಲ್ಪ ಹೆಚ್ಚಿಗೆ ಇತ್ತು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರು ಬಿಟ್ಟುಹೋದ ಸ್ವತ್ತಿನ ಮೇಲ್ವಿಚಾರಕರಾಗಿದ್ದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಖೈಬರ್‌ನಲ್ಲಿ ಸಾಮಗ್ರಿಗಳನ್ನು ಖರೀದಿಸಿ ಅವರ ಪುತ್ರನಿಗೆ ನೀಡಿದ್ದರು. ಹಝ್ರತ್ ಅಬ್ದುಲ್ಲಾ ಬಿನ್ ಜಹ್‌ಶ್ ಬುದ್ದಿಶಾಲಿಯೂ ಉತ್ತಮ ಸಲಹೆ ನೀಡುವವರೂ ಆಗಿದ್ದರು.

ಇನ್ನೊಬ್ಬ ಸಹಾಬಿ ಹಝ್ರತ್ ಕಅಬ್ ಬಿನ್ ಝೈದ್ ಆಗಿದ್ದಾರೆ. ಅವರ ಪೂರ್ಣ ಹೆಸರು ಹಝ್ರತ್ ಕಅಬ್ ಬಿನ್ ಝೈದ್ ಬಿನ್ ಖೈಸ್ ಬಿನ್ ಮಾಲಿಕ್ ಎಂದಾಗಿದೆ.

ಅವರು ಬನೂ ನಜ್ಜಾರ್ ಗೋತ್ರಕ್ಕೆ ಸೇರಿದವರಾಗಿದ್ದರು. ಅವರು ಬದರ್ ಯುದ್ಧದಲ್ಲಿ ಭಾಗವಹಿಸಿದ್ದರು ಮತ್ತು ಖಂದಖ್ ಯುದ್ಧದಲ್ಲಿ ಶಹೀದರಾದರು. ಅವರಿಗೆ ಉಮಯ್ಯಾ ಬಿನ್ ರಬೀಅ ಬಿನ್ ಸಖರ್‌ನ ಬಾಣ ತಾಗಿತ್ತು ಎಂದು ಹೇಳಲಾಗಿದೆ.

ಮೂರನೆಯ ಸಹಾಬಿ ಹಝ್ರತ್ ಸಾಲಿಹ್ ಶುಕ್ರಾನ್ ಆಗಿದ್ದಾರೆ. ಅವರ ಹೆಸರು ಸಾಲಿಹ್ ಎಂದೂ ಉಪನಾಮ ಶುಕ್ರಾನ್ ಎಂದೂ ಆಗಿತ್ತು. ಅವರು ಶುಕ್ರಾನ್ ಎಂದೇ ಪ್ರಸಿದ್ಧರಾಗಿದ್ದರು. ಹಝ್ರತ್ ಸಾಲಿಹ್ ಶುಕ್ರಾನ್‌ರವರು ಹಝ್ರತ್ ಅಬ್ದುರ್ರಹ್ಮಾನ್ ಔಫ್‌ರವರ ಕಪ್ಪು ವರ್ಣದ ಗುಲಾಮರಾಗಿದ್ದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರನ್ನು ತನ್ನ ಸೇವೆಗೋಸ್ಕರ ಖರೀದಿಸಿದ್ದರು. ಕೆಲವು ವರದಿಗಳ ಪ್ರಕಾರ ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್ ಹಣ ಪಡೆಯದೆ ಉಚಿತವಾಗಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ನೀಡಿದ್ದರು. ಬದರ್ ಯುದ್ಧದ ನಂತರ ಅವರನ್ನು ಸ್ವತಂತ್ರ ಗೊಳಿಸಲಾಯಿತು. ಹಝ್ರತ್ ಜಹಫರ್ ಬಿನ್ ಮುಹಮ್ಮದ್ ಸಾದಿಖ್ ಹೇಳುತ್ತಾರೆ: ಹಝ್ರತ್ ಶುಕ್ರಾನ್ ಅಸ್‌ಹಾಬುಸ್ಸುಫ್ಫಕ್ಕೆ ಸೇರಿದವರಾಗಿದ್ದರು. ಅವರಿಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮೃತ ಶರೀರಕ್ಕೆ ಸ್ನಾನ ಮಾಡಿಸುವ ಮತ್ತು ದಫನ್ ಕ್ರಿಯೆಯಲ್ಲಿ ಭಾಗವಹಿಸುವ ಭಾಗ್ಯ ಲಭಿಸಿತ್ತು. ಹಝ್ರತ್ ಇಬ್ನು ಅಬ್ಬಾಸ್ ಹೇಳುತ್ತಾರೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಅವರ ಅಂಗಿಯಲ್ಲಿಯೇ ಸ್ನಾನ ಮಾಡಿಸಲಾಯಿತು. ಪ್ರವಾದಿವರ್ಯರನ್ನು ದಫನ್ ಮಾಡುವಾಗ ಹಝ್ರತ್ ಅಲಿ, ಹಝ್ರತ್ ಫಝುಲ್ ಬಿನ್ ಅಬ್ಬಾಸ್, ಹಝ್ರತ್ ಖುಸಮ್ ಬಿನ್ ಅಬ್ಬಾಸ್, ಹಝ್ರತ್ ಶುಕ್ರಾನ್, ಹಝ್ರತ್ ಔಸ್ ಬಿನ್ ಖೂಲಿ ಖಬರ್‌ನಲ್ಲಿ ಪ್ರವೇಶಿಸಿದ್ದರು. ಹಝ್ರತ್ ಶುಕ್ರಾನ್ ಹೇಳುತ್ತಾರೆ ಅಲ್ಲಾಹನಾಣೆ, ನಾನೇ ಗೋರಿಯ ತಳಭಾಗದಲ್ಲಿ ಮಖ್‌ಮಲ್ ಬಟ್ಟೆಯ ಚಾದರನ್ನು ಹಾಸಿದ್ದೆ. ಹಝ್ರತ್ ಶುಕ್ರಾನ್ ಹೇಳುತ್ತಾರೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೊದಿಕೆಯಾಗಿ ಬಳಸುತ್ತಿದ್ದ ಮತ್ತು ಹಾಸುತ್ತಿದ್ದ ಆ ಚಾದರವನ್ನು ಅವರು ನಿಧನ ಹೊಂದಿದ ನಂತರ ಬೇರೆ ಯಾರೂ ಬಳಸಬಾರದೆಂದು ನಾನು ಇಚ್ಛಿಸುತ್ತಿದ್ದೆ. ಮರಿಸೀಅ್ ಯುದ್ಧದ ನಂತರ ಸೆರೆ ಹಿಡಿದವರ ಮತ್ತು ಅಲ್ಲಿ ವಶಪಡಿಸಿದ್ದ ಸಾಮಗ್ರಿಗಳು, ಆಯುಧಗಳು, ಮೃಗಗಳು ಮತ್ತು ಇತರ ವಸ್ತುಗಳ ಮೇಲ್ವಿಚಾರಕರನ್ನಾಗಿ ಹಝ್ರತ್ ಶುಕ್ರಾನ್‌ರನ್ನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನೇಮಿಸಿದ್ದರು. ಅವರು ಬಹಳ ಉತ್ತಮವಾಗಿ ತಮ್ಮ ಕೆಲಸ ನಿರ್ವಹಿಸಿದರು. ಅವರ ಬಗ್ಗೆ ಒಂದು ಪ್ರಸ್ತಾಪ ಹೀಗೆ ದೊರಕುತ್ತದೆ. ಹಝ್ರತ್ ಉಮರ್ ಹಝ್ರತ್ ಶುಕ್ರಾನರ ಪುತ್ರ ಅಬ್ದುರ್ರಹ್ಮಾನ್‌ರನ್ನು ಹಝ್ರತ್ ಅಬೂ ಮೂಸಾ ಅಶ್‌ಅರಿ ಬಳಿಗೆ ಕಳುಹಿಸಿದಾಗ ಒಂದು ಪತ್ರದಲ್ಲಿ ಹೀಗೆ ಬರೆದರು: ನಾನು ನಿಮ್ಮ ಬಳಿಗೆ ಒಬ್ಬ ಸಾತ್ವಿಕ ವ್ಯಕ್ತಿಯಾದ ಅಬ್ದುರ್ರಹ್ಮಾನ್ ಬಿನ್ ಸಾಲಿಹ್ ಶುಕ್ರಾನರನ್ನು ಕಳುಹಿಸುತ್ತಿದ್ದೇನೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರ ಪಿತನ ಬಗ್ಗೆ ಹೊಂದಿದ್ದ ಸ್ಥಾನವನ್ನು ಪರಿಗಣಿಸಿ ಅವರೊಂದಿಗೆ ವರ್ತಿಸಿರಿ.

ಇದು ಇಸ್ಲಾಮ್ ಗುಲಾಮರಿಗೆ ನೀಡಿದ ಸ್ಥಾನವಾಗಿತ್ತು. ಅವರನ್ನು ಗುಲಾಮಗಿರಿಯಿಂದ ಸ್ವತಂತ್ರರನ್ನಾಗಿ ಮಾಡಿದರಲ್ಲದೆ ಅವರ ಮಕ್ಕಳಿಗೆ ಸಹ ಗೌರವದ ಸ್ಥಾನ ನೀಡಲಾಗಿತ್ತು. ಒಂದು ವರದಿ ಪ್ರಕಾರ ಹಝ್ರತ್ ಶುಕ್ರಾನ್ ಮದೀನದಲ್ಲಿ ವಾಸಿಸುತ್ತಿದ್ದರು. ಅವರಿಗೆ ಬಸ್ರದಲ್ಲಿಯೂ ಒಂದು ಮನೆ ಇತ್ತು. ಹಝ್ರತ್ ಉಮರ್‌ರವರ ಖಿಲಾಫತ್ ಕಾಲದಲ್ಲಿ ಅವರು ಮೃತರಾದರು.

ಇನ್ನೊಬ್ಬ ಸಹಾಬಿ ಹಝ್ರತ್ ಮಾಲಿಕ್ ಬಿನ್ ದಹಶಮ್ ಆಗಿದ್ದಾರೆ. ಅವರು ಖದ್‌ರಜ್ ಗೋತ್ರದ ಬನೂಗನಮ್ ಬಿನ್ ಔಫ್ ಕುಟುಂಬಕ್ಕೆ ಸೇರಿದ್ದರು. ಕೆಲವು ವರದಿಗಳ ಪ್ರಕಾರ ಅವರು ಬೈಅತ್ ಉಖ್‌ಬಾದಲ್ಲಿ ಸೇರಿದ್ದರು. ಅವರು ಬದರ್, ಉಹುದ್, ಖಂದಖ್ ಮತ್ತು ಅನಂತರದ ಇತರ ಎಲ್ಲಾ ಯುದ್ಧಗಳಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೊತೆಗೆ ಭಾಗವಹಿಸಿದ್ದರು. ಸಹೀಹ್ ಬುಖಾರಿಯ ಒಂದು ಹದೀಸಿನಲ್ಲಿ ಹೀಗೆ ಹೇಳಲಾಗಿದೆ: ಬದರ್ ಯುದ್ಧದಲ್ಲಿ ಭಾಗವಹಿಸಿದ್ದ ಅನ್‌ಸಾರಿಗಳಲ್ಲಿ ಒಬ್ಬರಾದ ಹಝ್ರತ್ ಉತ್‌ಬಾನ್ ಬಿನ್ ಮಾಲಿಕ್ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿ ಬಂದು ಹೇಳಿದರು: ನನ್ನ ದೃಷ್ಟಿ ಶಕ್ತಿ ಬಲಹೀನವಾಗಿದೆ. ನಾನು ನನ್ನ ಜನರಿಗೆ ನಮಾಝ್ ಮಾಡಿಸುತ್ತೇನೆ. ಮಳೆ ಬಂದಾಗ ನನ್ನ ಮತ್ತು ಅವರ ಮಧ್ಯೆ ಇರುವ ಕಾಲುವೆಯಲ್ಲಿ ನೀರು ತುಂಬುತ್ತದೆ. ಆಗ ಅವರ ಮಸ್‌ಜಿದ್‌ಗೆ ಹೋಗಿ ನಮಾಝ್ ಮಾಡಿಸಲು ನನಗೆ ಸಾಧ್ಯವಾಗುವುದಿಲ್ಲ. ಓ ಅಲ್ಲಾಹನ ಸಂದೇಶವಾಹಕರೇ, ತಾವು ನನ್ನ ಮನೆಗೆ ಬಂದು ನಮಾಝ್ ಮಾಡಬೇಕೆಂಬುದು ನನ್ನ ಬಯಕೆಯಾಗಿದೆ. ನಾನು ಅದನ್ನು ಮಸ್‌ಜಿದ್ ಮಾಡುವೆನು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು, ಇನ್‌ಶಾಅಲ್ಲಾಹ್ ನಾನು ಬರುವೆನು. ಅವರು ಹೇಳುತ್ತಾರೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಮತ್ತು ಹಝ್ರತ್ ಅಬೂಬಕರ್ ರಝಿಯಲ್ಲಾಹು ಅನ್‌ಹು ಒಂದು ದಿನ ನನ್ನ ಮನೆಗೆ ಬಂದರು. ಮನೆಯ ಒಂದು ಬದಿಯಲ್ಲಿ ನಮಾಝ್ ಅನುಷ್ಠಿಸಿದರು. ಬಡಾವಣೆಯ ಕೆಲವರು ಅಲ್ಲಿ ಜಮಾಯಿಸಿದಾಗ ಅವರಲೊಬ್ಬ ಹೇಳಿದ ಮಾಲಿಕ್ ಬಿನ್ ದಹ್‌ಶಮ್ ಎಲ್ಲಿದ್ದಾರೆ. ಆಗ ಒಬ್ಬ ಹೇಳಿದ: ಅವನು ಮುನಾಫಿಖ್ ಅವನು ಅಲ್ಲಾಹನನ್ನೂ ಅವನ ರಸೂಲರನ್ನೂ ಪ್ರೀತಿಸುವುದಿಲ್ಲ ಎಂದು. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಹಾಗೆ ಹೇಳಬಾರದು. ಅವರು ಲಾಇಲಾಹ ಇಲ್ಲಲ್ಲಾಹ್ ಎಂದು ಹೇಳುತ್ತಾರೆ ಮತ್ತು ಅಲ್ಲಾಹನ ಸಂಪ್ರೀತಿ ಇಚ್ಛಿಸುತ್ತಾರೆಂದು ನೀವು ನೋಡುವುದಿಲ್ಲವೇ? ಆ ವ್ಯಕ್ತಿ ಹೇಳಿದ: ಅಲ್ಲಾಹ್ ಮತ್ತು ಅವನ ರಸೂಲರು ಎಲ್ಲರಿಗಿಂತ ಚೆನ್ನಾಗಿ ತಿಳಿದಿರುವರು ಎಂದು. ಆ ವ್ಯಕ್ತಿ ಪುನಃ ಹೇಳಿದನು: ಅವರ ಶ್ರದ್ಧೆ ಮತ್ತು ಹಿತಕಾಂಕ್ಷೆ ಮುನಾಫಿಖರ ಬಗ್ಗೆ ಇದೆ ಎಂದು ನಾವು ಕಾಣುತ್ತೇವೆ. ಮೃದು ಹೃದಯದ ಕಾರಣದಿಂದ ಅವರು ಮುನಾಫಿಖ್‌ಗಳಿಗೆ ತಬ್ಲೀಗ್ ಮಾಡಿ ಅವರನ್ನು

ಇಸ್ಲಾಮಿಗೆ ಸಮೀಪವಾಗಿ ತರಲು ಇಚ್ಛಿಸುತ್ತಿದ್ದರು. ಅವರಿಗೆ ಮುನಾಫಿಖರ ಬಗ್ಗೆ ಸಹಾನುಭೂತಿ ಇದ್ದಿರಬಹುದು. ಬಹುಶಃ ಆ ಕಾರಣದಿಂದ ಸಹಾಬರಲ್ಲಿ ತಪ್ಪು ಗ್ರಹಿಕೆ ಉಂಟಾಗಿರಬಹುದು. ಹಝ್ರತ್ ಅನಸ್ ಬಿನ್ ಮಾಲಿಕ್ ವರದಿ ಮಾಡುತ್ತಾರೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮುಂದೆ ಹಝ್ರತ್ ಮಾಲಿಕ್ ಬಿನ್ ದಹ್‌ಶಮ್‌ರನ್ನು ನಿಂದಿಸಿದಾಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: **ಲಾ ತಸುಬ್ಬು ಅಸ್‌ಹಾಬೀ** – ನೀವು ನನ್ನ ಸಹಾಬರನ್ನು ನಿಂದಿಸಬೇಡಿರಿ ಎಂದು.

ತಬೂಕ್ ಯುದ್ಧದಿಂದ ಮರಳಿ ಬರುವಾಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮದೀನದಿಂದ ಸ್ವಲ್ಪ ದೂರ ಒಂದು ಸ್ಥಳದಲ್ಲಿ ತಂಗಿದರು. ಆಗ ಅವರಿಗೆ ಮಸ್‌ಜಿದ್ ಝಿರಾರ್ ಬಗ್ಗೆ ವಹೀ ಲಭಿಸಿತು. ಅವರು ಹಝ್ರತ್ ಮಾಲಿಕ್ ಬಿನ್ ದಹ್‌ಶಮ್ ಮತ್ತು ಮುಯಿನ್ ಬಿನ್ ಅದಿರನ್ನು ಕರೆದು ಮಸ್‌ಜಿದ್ ಝಿರಾರ್ ಕಡೆಗೆ ಹೋಗಲು ಹೇಳಿದರು. ಅವರಿಬ್ಬರೂ ವೇಗವಾಗಿ ಬನೂ ಸಾಲಿಮ್ ಗೋತ್ರದ ಬಳಿಗೆ ತಲಪಿದರು. ಅದು ಮಾಲಿಕ್ ಬಿನ್ ದಹ್‌ಶಮರ ಗೋತ್ರವಾಗಿತ್ತು. ಹಝ್ರತ್ ಮಾಲಿಕ್ ತನ್ನ ಜೊತೆಗಾರನೊಂದಿಗೆ ಹೇಳಿದರು: ನಾನು ಮನೆಗೆ ಹೋಗಿ ಬೆಂಕಿ ಹೊತ್ತಿಸಲು ಸೌದೆ ತರುವೆನು. ಅವರು ಮನೆಗೆ ಹೋಗಿ ಖರ್ಜೂರದ ಒಣ ಸೋಗೆಗಳನ್ನು ತಂದರು. ಅವರಿಬ್ಬರೂ ಮಸ್‌ಜಿದ್ ಝಿರಾರ್‌ಗೆ ಹೋದರು. ಒಂದು ವರದಿ ಪ್ರಕಾರ ಮಗ್‌ರಿಬ್ ಮತ್ತು ಇಶಾ ಮಧ್ಯೆ ಅವರು ಅಲ್ಲಿಗೆ ತಲಪಿದರು. ಅವರು ಅದಕ್ಕೆ ಬೆಂಕಿ ಹಚ್ಚಿ ಅದನ್ನು ಕೆಡವಿ ಹಾಕಿದರು.

ಕೆಲವರಿಗೆ ಬೇರೆ ಕೆಲವರ ಬಗ್ಗೆ ತಪ್ಪು ಗ್ರಹಿಕೆ ಉಂಟಾಗಿ ಅವರು ತಪ್ಪು ದಾರಿಯಲ್ಲಿದ್ದಾರೆಂದು ಊಹಿಸಿ ಅವರನ್ನು ಮುನಾಫಿಖ್ ಎಂದು ಸಹ ಕರೆದರು. ಆದರೆ ಅದೇ ಜನರು ಮುನಾಫಿಖ್‌ಗಳ ಕೇಂದ್ರವನ್ನು ಧ್ವಂಸ ಮಾಡುವವರಾದರು. ಅಲ್ಲಾಹನ ಆಜ್ಞೆ ಪ್ರಕಾರ ಅದನ್ನು ನಾಶ ಮಾಡುವವರಾದರು. ಅಲ್ಲಾಹನು ಆ ಸಹಾಬರ ಪದವಿಗಳನ್ನು ಉನ್ನತಗೊಳಿಸುತ್ತಾ ಇರಲಿ. ನಮಗೆ ಸಹ ನಮ್ಮನ್ನು ಪರಿಶೋಧಿಸುವ ಭಾಗ್ಯ ಲಭಿಸಲಿ. ಅಲ್ಲಾಹನ ಆಜ್ಞೆಗಳನ್ನು ನಾವು ಹೇಗೆ ಈಡೇರಿಸುತ್ತಿದ್ದೇವೆ ಎಂದು ನಾವು ಪರಿಶೋಧಿಸುವ ಭಾಗ್ಯ ಲಭಿಸಲಿ – ಆಮೀನ್.

*****

***Friday Sermon delivered by Hadrath Khaleefatul Masih Al Khamis*** *(atba)*

*At Masjid Baithul Futhuh, London. On 11-05-2018.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon